# ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್

ನಂ. 67, 1ನೇ ಮಹಡಿ, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ ಆವರಣ, ಪದ್ಮನಾಭನಗರ, ಬನಶಂಕರಿ 2ನೇ ಹಂತ
ಬೆಂಗಳೂರು-560 070. ದೂರವಾಣಿ / ಫ್ಯಾಕ್ಸ್ : 080-26692046

2012 International Year of Coopertives

# Karnataka Institute of Co-operative Management

No. 67, First Floor, RICM Campus, Padmanabhanagar, Banashankari 2nd Stage
Bangalore - 560 070. Email : kicmprinci@gmail.com

KICM


ನಂ. ಕೆ.ಐ.ಸಿ.ಎಂ.ಬೆಂ./ 77/2018-2019.

ದಿನಾಂಕ. 30-06-2018.

## -: ಮನವಿ :-

ಗೆ,

ಅಧ್ಯಕ್ಷರು,
ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ.,
ಬೆಂಗಳೂರು.

website & Mail

12/7/18

ಮಾನ್ಯರೇ,

ವಿಷಯ:-ದಿನಾಂಕ:16.07.2018ರಿಂದ ಪ್ರಾರಂಭವಾಗುವ "ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್" (ದೂರ ಶಿಕ್ಷಣ) ತರಬೇತಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳನ್ನು ಪ್ರವೇಶ ಮಾಡಿಕೊಳ್ಳಲು ತಾವು ಸಹಕರಿಸಬೇಕಾಗಿ ಮನವಿ ಮಾಡಿಕೊಳ್ಳುವ ಕುರಿತು.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಬೆಂಗಳೂರು ತರಬೇತಿ ಸಂಸ್ಥೆಯಲ್ಲಿ ದಿನಾಂಕ:16.07.2018 ರಿಂದ ಪ್ರಾರಂಭವಾಗುವ **6 ತಿಂಗಳು/ 180** ದಿನಗಳ ಅವಧಿಯ **ದೂರ ಶಿಕ್ಷಣದ ಮೂಲಕ "ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್"** (ಡಿ.ಸಿ.ಎಂ) ತರಬೇತಿಯು ಪ್ರಾರಂಭವಾಗಲಿದ್ದು, ಸಹಕಾರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ದೂರ ಶಿಕ್ಷಣವನ್ನು ಪ್ರಾರಂಭಿಸಲಾಗಿದೆ.

ದೂರ ಶಿಕ್ಷಣ ಡಿ.ಸಿ.ಎಂ., ತರಬೇತಿಯ ಅರ್ಜಿ ಫಾರಂ ಮತ್ತು ಕೈಪಿಡಿ ಪುಸ್ತಕವನ್ನು ಕೆ.ಐ.ಸಿ.ಎಂ., ತರಬೇತಿ ಸಂಸ್ಥೆ ಹಾಗೂ ಜಿಲ್ಲಾ ಸಹಕಾರ ಯೂನಿಯನ್‌ಗಳಿಂದ ಪಡೆಯಬಹುದು. ಅರ್ಜಿ ಮತ್ತು ಕೈಪಿಡಿ ಪುಸ್ತಕದ ಶುಲ್ಕ ರೂ.200/- (ರೂಪಾಯಿ ಎರಡು ನೂರು ಮಾತ್ರ)ಗಳನ್ನು ನಗದಾಗಿ ಪಾವತಿಸಿ ತರಬೇತಿ ಸಂಸ್ಥೆ ಹಾಗೂ ಜಿಲ್ಲಾ ಸಹಕಾರ ಯೂನಿಯನ್‌ನಲ್ಲಿ ಪಡೆಯಬಹುದು. ಅಂಚೆಯ ಮೂಲಕ ಅರ್ಜಿ ಪಡೆಯಲಿಚ್ಚಿಸುವ ಅಭ್ಯರ್ಥಿಗಳು ರೂ.10/- ಮೌಲ್ಯದ ಸ್ಟಾಂಪ್ ಅಂಟಿಸಿದ ಸ್ವ-ವಿಳಾಸವಿರುವ 12"x10" ಅಳತೆಯ ಲಕೋಟೆಯನ್ನುರೂ.200/-ಗಳ ಡಿ.ಡಿ/ಪೋಸ್ಟಲ್‌ಆರ್ಡರ್ ಜೊತೆಗೆ ಲಗತ್ತಿಸಿ ಕಳುಹಿಸಿ ಪಡೆಯಬಹುದು. ದಿನಾಂಕ:16.07.2018ರ ಒಳಗಾಗಿ ಸಿಬ್ಬಂದಿಗಳು ಅರ್ಜಿಯನ್ನು ಭರ್ತಿ ಮಾಡಿ **ಪ್ರಾಂಶುಪಾಲರು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು** ಇವರಿಗೆ ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ತರಬೇತಿ ಸಂಸ್ಥೆಯ ಪ್ರಾಂಶುಪಾಲರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಆದುದರಿಂದ ತಮಗೆ ಹಲವಾರು ಸಂಘ/ಸಂಸ್ಥೆಗಳ ಅಧಿಕಾರಿಗಳೊಂದಿಗೆ ಮತ್ತು ಅಧಿಕಾರೇತರರೊಂದಿಗೆ ಉತ್ತಮ ಒಡನಾಟವಿರುವುದರಿಂದ ತಾವು ದಯಮಾಡಿ ಸದರಿ ತರಬೇತಿಗೆ ಹೆಚ್ಚಿನ ಸಂಖ್ಯೆಯಲ್ಲಿ ನೌಕರರುಗಳನ್ನು ಪ್ರವೇಶ ಪಡೆಯಲು ಮತ್ತು ತರಬೇತಿ ಕಾರ್ಯಕ್ರಮ ಯಶಸ್ವಿಗೊಳಿಸಲು ಅಭ್ಯರ್ಥಿಗಳನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡುವ ಬಗ್ಗೆ ತಮ್ಮ ತುಂಬು ಹೃದಯದ ಸಹಕಾರವನ್ನು ಕೋರುತ್ತೇವೆ.

ವಂದನೆಗಳೊಂದಿಗೆ,

ಕ.ರಾ.ಸ.ಪ.ಸ.ಮ.ನಿ.
ಈ ಪತ್ರವನ್ನು ಸ್ವೀಕರಿಸಲಾಗಿದೆ
ಸ್ವೀಕೃತ ಸಂಖ್ಯೆ 493 ದಿನಾಂಕ 12/7/18
ಗುಮಾಸ್ತ ಮು.ಕಾ.ನಿ.ಅ.

ತಮ್ಮ ವಿಶ್ವಾಸಿ,

(ರೇಣುಕಾ ಆರ್.ಎಸ್.)
ಪ್ರಾಚಾರ್ಯರು
ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್
ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್
ಬೆಂಗಳೂರು - 560 070.